# ಕನ್ನಡ ನುಡಿವ ಆಕಾಂಕ್ಷೆ



‘ತುಂಬ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನನಗೆ ಕರ್ನಾಟಕ ತುಂಬ ತುಂಬ ಇಷ್ಟ ಆಯ್ತು.’ ವೇದಿಕೆಯ ಮೇಲೆ ಹಂಸದಂಥ ಹುಡುಗಿ ಆಕಾಂಕ್ಷಾ ಮುದ್ದು ಮೊದ್ದು ಕನ್ನಡದಲ್ಲಿ ಹೇಳುತ್ತಿದ್ದರೆ ಚಪ್ಪಾಳೆಗಳ ಸುರಿಮಳೆಯೇ ಸುರಿಯಿತು.

ರವಿಚಂದ್ರನ್ ಅವರ ಎರಡನೇ ಮಗ ‘ತ್ರಿವಿಕ್ರಮ’ ಜೂ. 24ರಂದು ಬಿಡುಗಡೆಯಾಗಿದೆ. ಈ ಚಿತ್ರದ ನಾಯಕಿ, ಉತ್ತರದ ಹುಡುಗಿ ಆಕಾಂಕ್ಷಾ ಶರ್ಮಾ ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಮಾತಾಡುವಾಗ ಕಷ್ಟಪಟ್ಟಾದರೂ ಕನ್ನಡದಲ್ಲಿಯೇ ಹೆಚ್ಚು ಮಾತಾಡಲು ಯತ್ನಿಸಿದ್ದು ವಿಶೇಷವಾಗಿ ಗಮನಸೆಳೆಯಿತು.

ಆಕಾಂಕ್ಷಾಗೆ ಇದು ಮೊದಲ ಕನ್ನಡ ಸಿನಿಮಾ. ಸಹನಾಮೂರ್ತಿ ನಿರ್ದೇಶನದ ‘ತ್ರಿವಿಕ್ರಮ’ ಅವರ ಪಾಲಿಗೆ ತರಬೇತಿ ತರಗತಿಯ ಹಾಗಿತ್ತಂತೆ.

‘ಇದು ನನ್ನ ಮೊದಲ ಕನ್ನಡ ಸಿನಿಮಾ. ಕಳೆದ ಮೂರು ವರ್ಷಗಳಿಂದ ಈ ಸಿನಿಮಾದಲ್ಲಿ ಕೆಲಸ ಮಾಡುತ್ತ ಕರ್ನಾಟಕದಲ್ಲಿ ಸಾಕಷ್ಟು ಸುತ್ತಾಡಿದ್ದೇನೆ. ತುಂಬ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನನಗೆ ಕರ್ನಾಟಕ ತುಂಬ ತುಂಬ ಇಷ್ಟ ಆಯ್ತು. ಈ ನೆಲದಿಂದ ನಾನು ಸಾಕಷ್ಟು ಸಂಗತಿಗಳನ್ನು ಕಲಿತುಕೊಂಡಿದ್ದೇನೆ. ನಿಮ್ಮೆಲ್ಲರ ಪ್ರೀತಿ ನೋಡಿ ನನಗೆ ಖುಷಿಯಾಗಿದೆ’ ಎಂದು ಅವರು ಕನ್ನಡ, ಇಂಗ್ಲಿಷ್, ಮೂರೂ ಭಾಷೆಗಳಿಗೆ ಜಿಗಿಯುತ್ತಲೇ ಹೇಳಿದರು.

‘ಈ ಸಿನಿಮಾದಿಂದ ನಾನು ತುಂಬಾ ನೆನಪುಗಳು ಮತ್ತು ಪಾಠಗಳನ್ನು ನನ್ನೊಂದಿಗೆ ತೆಗೆದುಕೊಂಡು ಹೋಗುತ್ತಿದ್ದೇನೆ. ಅದಕ್ಕಾಗಿ ನನ್ನ ತಂಡಕ್ಕಾಗಿ ಕೃತಜ್ಞತೆ ಹೇಳುತ್ತೇನೆ’ ಎಂದ ಅವರು ‘ಈ ಸಿನಿಮಾ ನನಗೆ ಇನ್ನೊಬ್ಬ ತಂದೆಯನ್ನು ನೀಡಿದೆ’ ಎಂಬೊಂದು ಬಾಂಬು ಸಿಡಿಸಿದರು. ನಿರ್ದೇಶಕ ಸಹನಾಮೂರ್ತಿ ಅವರತ್ತ ಬೊಟ್ಟುಮಾಡಿದ ಆಕಾಂಕ್ಷ, ‘ಅವರು ನನ್ನನ್ನು ಮಗುವಿನ ಹಾಗೆಯೇ ನೋಡಿಕೊಂಡಿದ್ದಾರೆ. ಹಾಗಾಗಿ ಅವರನ್ನು ನನ್ನ ತಂದೆ ಎಂದು ಕರೆಯುತ್ತಿದ್ದೆ. ಅದನ್ನು ಎಲ್ಲರೂ ಆಡಿಕೊಂಡು ನಗುತ್ತಿದ್ದರು’ ಎಂದು ನಾವೂ ನಗುಚೆಲ್ಲಿದರು.

ಮಾತಿನ ಕೊನೆಗೆ ಪುನೀತ್ ರಾಜ್‌ಕುಮಾರ್ ಅವರನ್ನೂ ನೆನಪಿಸಿಕೊಂಡರು. ‘ನನಗೆ ಡಾನ್ಸ್ ಎಂದರೆ ತುಂಬ ಇಷ್ಟ. ಅಪ್ಪು ಅವರ ಡಾನ್ಸ್ ನೋಡಿ ನಾನು ಅವರ ದೊಡ್ಡ ಅಭಿಮಾನಿಯಾಗಿಬಿಟ್ಟಿದ್ದೆ’ ಎಂದ ಅವರು ‘ಜೈ ಕರ್ನಾಟಕ’ದ ಜೊತೆಗೆ ‘ಜೈ ಅಪ್ಪು ಸರ್’ ಎಂಬ ಘೋಷವನ್ನೂ ಸೇರಿಸಿಯೇ ಮಾತು ಮುಗಿಸಿದರು. ■